

ರಾಬರ್ಟ್ ಲೆವೆಂಡೋಸ್ಕಿ



ಲೂಯಿಸ್ ಸ್ವಾರೆಜ್



ಹೆರಿ ಕೇನ್



ಮೆಸ್ಸಿ ಮತ್ತು ನೇಮರ್

## ಲೂಯಿಸ್ ಸ್ವಾರೆಜ್ (ಉರುಗ್ವೆ)

ವಿಶ್ವದ ಶ್ರೇಷ್ಠ ಕ್ಲಬ್‌ಗಳಾದ ಅಜಕ್ಸ್, ಲೀವರ್‌ಪೂಲ್, ಬಾರ್ಸಿಲೊನಾ ಪರ ಆಡಿರುವ ಲೂಯಿಸ್ ಆಡುತ್ತಿರುವ ಮೂರನೇ ಫಿಫಾ ವಿಶ್ವಕಪ್ ಇದು. ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ 51 ಗೋಲು ಗಳಿಸಿದ ಖ್ಯಾತಿಯಿದೆ. ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ 21 ಮತ್ತು ಪ್ರಧಾನ ಹಂತದಲ್ಲಿ 5 ಗೋಲುಗಳನ್ನು ಹೊಡೆದಿದ್ದಾನೆ.

ಚೆಂಡಿನ ಜೊತೆ ವೇಗವಾಗಿ ನಿಯಂತ್ರಣ ಸಾಧಿಸಿ ಬಲವಾದ ಹೊಡೆತಗಳನ್ನು ನೀಡುವುದು, ಎದುರಾಳಿ ಆಟಗಾರನ ಎರಡೂ ಕಾಲುಗಳ ನಡುವೆ ಚೆಂಡು ಒದೆಯುವುದು ಈತನ ಆಟದ ತಂತ್ರಗಳಲ್ಲೊಂದು. ಜೊತೆಗೆ, ಎದುರಾಳಿ ಆಟಗಾರ ಚೆಂಡನ್ನು ಗುರಿ ಸೇರಿಸುವ ಸನಿಹದಲ್ಲಿದ್ದಾಗ ಭುಜಕ್ಕೆ ಜೋರಾಗಿ ಕಚ್ಚಿ ಗೋಲಿನ ಅವಕಾಶ ಹಾಳು ಮಾಡುವ 'ತಂತ್ರ'ವನ್ನೂ ಲೂಯಿಸ್ ಮಾಡುವುದಿದೆ. 2014ರ ವಿಶ್ವಕಪ್‌ನ ಗುಂಪಿನ ಕೊನೆಯ ಲೀಗ್ ಪಂದ್ಯದಲ್ಲಿ ಇಟಲಿ ತಂಡದ ಜಾರ್ಜಿಯೊ ಚೆಯಿಲ್ಲಿನಿಗೆ ಭುಜ ಕಚ್ಚಿ ಗೋಲುಗಳಿಸುವ ಅವಕಾಶ ತಪ್ಪಿಸಿದ್ದ. ಉರುಗ್ವೆ ಆ ಪಂದ್ಯದಲ್ಲಿ ಗೆಲುವು ಪಡೆದು ನೌಕೌಟ್ ಹಂತ ತಲುಪಿತ್ತು. ಲೂಯಿಸ್ ಮೈದಾನದಲ್ಲಿ ಇದ್ದಾಗಲೆಲ್ಲ ಅಭಿಮಾನಿಗಳು 'ಈ ಪಂದ್ಯದಲ್ಲಿ ಲೂಯಿಸ್ ಕಚ್ಚುತ್ತಾನೆ' ಎಂದು ಬೆಟ್ ಕೂಡ ಕಟ್ಟುತ್ತಾರೆ!

## ನೇಮರ್ (ಬ್ರೆಜಿಲ್)

ಪಾದ ನೋವಿನ ಸಮಸ್ಯೆ ಇದ್ದ ಕಾರಣ ಮೂರು ತಿಂಗಳು ಸ್ಪರ್ಧಾತ್ಮಕ ಟೂರ್ನಿಗಳಿಂದ ದೂರವಿದ್ದ ನೇಮರ್ ಈಗ ಚೇತರಿಸಿಕೊಂಡಿದ್ದಾನೆ. ಕ್ರೊವೇಷ್ಯಾ ವಿರುದ್ಧ ನಡೆದ ಸೌಹಾರ್ದ ಪಂದ್ಯದಲ್ಲಿ ಒಂದು ಗೋಲು ಗಳಿಸಿ ಫಿಟ್‌ನೆಸ್ ಸಾಬೀತು ಮಾಡಿದ್ದಾನೆ. 26ರ ಹರೆಯದ ನೇಮರ್‌ಗೆ ಇದು ಎರಡನೇ ವಿಶ್ವಕಪ್. ಅರ್ಹತಾ ಮತ್ತು ಪ್ರಧಾನ ಸುತ್ತಿನ ಪಂದ್ಯಗಳಲ್ಲಿ ಒಟ್ಟು ಹತ್ತು ಗೋಲು ಹೊಡೆದಿದ್ದಾನೆ.

ಸೆಂಟ್ರಲ್ ಸ್ಟ್ರೈಕರ್, ಎರಡನೇ ಸ್ಟ್ರೈಕರ್, ವಿಂಗರ್ ಮತ್ತು ಆಕ್ರಮಣಕಾರಿ ಮಿಡ್‌ಫೀಲ್ಡರ್ ಆಗಿ ನೇಮರ್‌ನದ್ದು ಆಲ್‌ರೌಂಡ್ ಜವಾಬ್ದಾರಿ! ಕ್ಲಬ್ ಮತ್ತು ರಾಷ್ಟ್ರೀಯ ತಂಡದ ಪರ ಆಡುವಾಗ ಒಂದೇ ರೀತಿಯ ಆಟದ ಯೋಜನೆ ರೂಪಿಸುವುದು ಈತನ ತಂತ್ರಗಾರಿಕೆ.

## ಥಾಮಸ್ ಮುಲ್ಲೆರ್ (ಜರ್ಮನಿ)

ಮೂರನೇ ಬಾರಿಗೆ ವಿಶ್ವಕಪ್ ಆಡುತ್ತಿರುವ ಥಾಮಸ್ ಆಕ್ರಮಣಕಾರಿ ಆಲ್‌ರೌಂಡರ್. ಕ್ಲಬ್ ಮತ್ತು ಅಂತರರಾಷ್ಟ್ರೀಯ ಪಂದ್ಯಗಳು ಸೇರಿ ಒಟ್ಟು 192 ಗೋಲುಗಳನ್ನು ಹೊಡೆದಿದ್ದಾನೆ. ಏಕಾಂಗಿಯಾಗಿ ಹೋರಾಟ ಮಾಡಿ ತಂಡಕ್ಕೆ ಗೆಲುವು ತಂದುಕೊಡಬಲ್ಲ ಸಾಮರ್ಥ್ಯವಿದೆ. 2014ರ ವಿಶ್ವಕಪ್‌ನ ಪೋರ್ಚುಗಲ್ ಎದುರಿನ ಪಂದ್ಯದಲ್ಲಿ ಜರ್ಮನಿ ತಂಡ 4–0ಗೋಲುಗಳಿಂದ ಗೆಲುವು ಪಡೆದಿತ್ತು. ಇದರಲ್ಲಿ ಮೂರು ಗೋಲುಗಳನ್ನು ಥಾಮಸ್ ತಂದುಕೊಟ್ಟು ಮೊದಲ ಹ್ಯಾಟ್ರಿಕ್ ಸಾಧಿಸಿದ್ದ. ಮೊದಲು ಮಿಡ್‌ಫೀಲ್ಡರ್ ಆಗಿದ್ದ ಥಾಮಸ್ ಈಗ ಸಂದರ್ಭಕ್ಕೆ ತಕ್ಕಂತೆ ಸ್ಥಳ ಬದಲಾಯಿಸಬಲ್ಲ.

## ಪಾಲ್ ಡೆಬಾಲ (ಅರ್ಜೆಂಟೀನಾ)

ಫಾರ್ವರ್ಡ್ ಆಟಗಾರ ಮತ್ತು ಆಕ್ರಮಣಕಾರಿ ಮಿಡ್‌ಫೀಲ್ಡರ್ ಆಗಿರುವ 24ರ ಹರೆಯದ ಪಾಲ್ ಡೆಬಾಲ ಪಾಲಿಗೆ ಇದು ಚೊಚ್ಚಲ ವಿಶ್ವಕಪ್. ಮೂರು ವರ್ಷಗಳ ಹಿಂದೆ ಅಂತರರಾಷ್ಟ್ರೀಯ ಪಂದ್ಯಕ್ಕೆ ಪದಾರ್ಪಣೆ ಮಾಡಿದ್ದು 12 ಪಂದ್ಯಗಳನ್ನಾಡಿದ್ದಾನೆ. ಚೆಂಡಿನೊಂದಿಗೆ ವೇಗವಾಗಿ ಮುನ್ನುಗ್ಗುವ ಛಲ, ಡ್ರಿಬ್ಲಿಂಗ್ ಮಾಡುವ ಕೌಶಲ, ನಿಯಮಿತ ಜಾಗದಲ್ಲಿ ಚೆಂಡನ್ನು ಹಿಡಿತಕ್ಕೆ ಪಡೆಯುವ ರೀತಿ, ಚೆಂಡಿನ ಜೊತೆ ಸಮತೋಲನ ಸಾಧಿಸುವ ರೀತಿ ಈತನ ಆಟದ ಸೊಬಗು ಹೆಚ್ಚಿಸುತ್ತದೆ.

## ಡೇವಿಡ್ ಸಿಲ್ವಾ (ಸ್ಪೇನ್)

ಎಂಟು ವರ್ಷಗಳಿಂದ ಮ್ಯಾಂಚೆಸ್ಟರ್ ಸಿಟಿ ಕ್ಲಬ್ ಪರ ಆಡುತ್ತಿರುವ ಡೇವಿಡ್ ಸಿಲ್ವಾ ಪಾಲಿಗಿದು ಮೂರನೇ ವಿಶ್ವಕಪ್. 120 ಅಂತರರಾಷ್ಟ್ರೀಯ ಪಂದ್ಯಗಳಿಂದ 35 ಗೋಲುಗಳನ್ನು ಹೊಡೆದಿದ್ದಾನೆ. ಸೆಂಟರ್ ಮಿಡ್‌ಫೀಲ್ಡರ್ ಮತ್ತು ಸೆಕೆಂಡ್ ಸ್ಟ್ರೈಕರ್ ಜವಾಬ್ದಾರಿ ನಿಭಾಯಿಸುತ್ತಾನೆ. ಡ್ರಿಬ್ಲಿಂಗ್, ಎಡಗಾಲಿನ ಮೂಲಕ ಚೆಂಡನ್ನು ಗುರಿ ಸೇರಿಸುವುದು, ಗೋಲು ಗಳಿಸುವ ಅವಕಾಶಗಳನ್ನು ಸೃಷ್ಟಿಸುವುದು, ಆಕ್ರಮಣಕಾರಿ ನಡೆ ಈತನ ಆಟದ ವಿಶೇಷ. ನಿಖರ ಪಾಸ್ ನೀಡುವುದು, ಸಣ್ಣ ಅವಕಾಶಗಳನ್ನೇ ಬಳಸಿಕೊಂಡು ಸಹ ಆಟಗಾರರ ನೆರವಿನಿಂದ ಚೆಂಡು ಗುರಿ ಸೇರಿಸುವ ತಂತ್ರ ಕರಗತ. ಸ್ಪೇನ್ ತಂಡ 2010ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದ ವಿಶ್ವಕಪ್‌ನಲ್ಲಿ ನೆದರ್ಲೆಂಡ್ಸ್ ತಂಡವನ್ನು ಮಣಿಸಿ ಚಾಂಪಿಯನ್ ಆಗಿತ್ತು. ಡೇವಿಸ್ ಡಿಲ್ವಾ ಕೂಡ ತಂಡದಲ್ಲಿದ್ದ.

## ಹೆರ‍್ರಿ ಕೇನ್ (ಇಂಗ್ಲೆಂಡ್)

ಸ್ಟ್ರೈಕರ್ ಹೆರ‍್ರಿ ಕೇನ್ ವಿಶ್ವಕಪ್‌ನಲ್ಲಿ ಇಂಗ್ಲೆಂಡ್ ತಂಡದ ನಾಯಕ. 24 ಅಂತರರಾಷ್ಟ್ರೀಯ ಪಂದ್ಯಗಳನ್ನಾಡಿದ್ದು, 13 ಗೋಲುಗಳನ್ನು ಗಳಿಸಿದ್ದಾನೆ. ಮಿಡ್‌ಫೀಲ್ಡ್‌ನಲ್ಲಿ ಜವಾಬ್ದಾರಿ. ಇಂಗ್ಲೆಂಡ್ 1950ರಿಂದ ಫಿಫಾ ವಿಶ್ವಕಪ್‌ನಲ್ಲಿ ಆಡುತ್ತಿದೆ. 1966ರಲ್ಲಿ ತಂಡ ಚಾಂಪಿಯನ್ ಆಗಿತ್ತು. 1990ರಲ್ಲಿ ನಾಲ್ಕನೇ ಸ್ಥಾನ ಪಡೆದಿತ್ತು. ಆ ಬಳಿಕ ಗಮನಾರ್ಹ ಸಾಧನೆ ಮಾಡಿಲ್ಲ. ಕೇನ್ ಆಟ ಈ ಬಾರಿ ತಂಡದ ಬಲ ಹೆಚ್ಚಿಸುವ ಭರವಸೆ ಮೂಡಿದೆ.